**E.C.A.No.1/2025**
**PW1**

ದಿನಾಂಕ 08.07.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃಅರ್ಜಿದಾರರ ಪರ ಶ್ರೀ ಹೆಚ್.ಕೆ.ಬಿ ವಕೀಲರಿಂದಃ

ನನಗೆ ಕೆಲಸದ ಸಮಯದಲ್ಲಿ ವಿದ್ಯುಚ್ಛಕ್ತಿ ಪ್ರವಹಿಸಿ ಅಪಘಾತ ಸಂಭವಿಸಿದ ಬಗ್ಗೆ ದಿ.18.9.2024 ರ ಉದಯವಾಣಿ ದಿನಪತ್ರಿಕೆಯಲ್ಲಿ ಸುದ್ದಿ ಪ್ರಕಟಗೊಂಡಿದ್ದು, ಆ ದಿನಪತ್ರಿಕೆಯನ್ನು ನಿಪಿ–1 ಎಂದು, ಆ ಪ್ರಕಟಣೆಯ ಭಾಗವನ್ನು ನಿಪಿ–1(ಎ) ಎಂದು, ದಿ.18.9.2024 ರ ಕರಾರು ಪತ್ರವನ್ನು ನಿಪಿ–2 ಎಂದು, ಎ.ಜೆ.ಆಸ್ಪತ್ರೆಯ ಕೇಸ್ ಶೀಟನ್ನು ನಿಪಿ–3 ಎಂದು, ಎ.ಜೆ.ಆಸ್ಪತ್ರೆಯ ಬಿಲ್ಲನ್ನು ನಿಪಿ–4 ಎಂದು, ಆ ಆಸ್ಪತ್ರೆಯವರು ನೀಡಿದ ಡಿಸ್ಚಾರ್ಜ್ ಸಮ್ಮರಿಯನ್ನು ನಿಪಿ–5 ಎಂದು, ಅಂಗನ್ಯೂನತಾ ದೃಢೀಕರಣ ಪತ್ರವನ್ನು ನಿಪಿ–6 ಎಂದು, ನಾನು ನಮ್ಮ ವಕೀಲರ ಮೂಲಕ ಮೆಸ್ಕಾಂ ನ ಅಧಿಕಾರಿಗಳಿಗೆ ಕಳುಹಿಸಿದ ನೋಟೀಸಿನ ಕಚೇರಿ ಪ್ರತಿಯನ್ನು ನಿಪಿ–7 ಎಂದು, ಐದು ಅಂಚೆ ರಶೀದಿಗಳನ್ನು ನಿಪಿ–8 ರಿಂದ 12 ಎಂದು, ಐದು ಅಂಚೆ ಸ್ವೀಕೃತಿ ಪತ್ರಗಳನ್ನು ನಿಪಿ–13 ರಿಂದ 17 ಎಂದು, ಡಿಸ್ಚಾರ್ಜ್ ಸಮ್ಮರಿಯನ್ನು ನಿಪಿ–18 ಎಂದು, ಆಸ್ಪತ್ರೆಯ ಬಿಲ್ಲನ್ನು ನಿಪಿ–19 ಎಂದು, ನಮ್ಮ ನೋಟೀಸಿಗೆ ಎದುರುದಾರರ ವಕೀಲರು ನೀಡಿದ ಪ್ರತ್ಯುತ್ತರವನ್ನು ನಿಪಿ–20 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿದಂತೆ ಆದೇಶಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ

(ಈ ಹಂತದಲ್ಲಿ ಸಾಕ್ಷಿಯ ಪಾಟೀ ಸವಾಲಿಗೆ ಎದುರುದಾರರ ಪರ ವಕೀಲರು ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ, ಸುಳ್ಯ